ಕೂಳೆಯನ್ನು ಭೂ ಮಟ್ಟದಿಂದ ಅರ್ಧ ಅಡಿ ಎತ್ತರ ಬಿಟ್ಟು ಕಟಾವು ಮಾಡುವುದು ಒಳ್ಳೆಯದು. ನೀರಾವರಿ ಬೆಳೆಯಾದಲ್ಲಿ ವರ್ಷಕ್ಕೆ 5 ರಿಂದ 6 ಬಾರಿ ಕಟಾವು ಮಾಡಿ ಎಕರೆಗೆ 60–70 ಟನ್ ಇಳುವರಿ ಪಡೆಯಬಹುದು. ಖುಷ್ಕಿ ಬೆಳೆಯಾದಲ್ಲಿ ವರ್ಷಕ್ಕೆ 3 ರಿಂದ 4 ಕಟಾವು ಮಾಡಿ 30–40 ಟನ್ ಪ್ರತಿ ಎಕರೆಗೆ ಇಳುವರಿ ಪಡೆಯಬಹುದು.



### ವಿಶೇಷ ಸೂಚನೆ

ಜೋಳದ ಎಳೆಕಡ್ಡಿಗಳಲ್ಲಿ ವಿಷಯುಕ್ತ ಆಮ್ಲಗಳು ಅಧಿಕವಾಗಿರುವುದರಿಂದ, ಯಾವುದೇ ಕಾರಣಕ್ಕೂ ಎಳೆಕಡ್ಡಿಗಳನ್ನು ಕಟಾವು ಮಾಡಿ ಮೇವಾಗಿ ಬಳಸಬಾರದು, ಹಾಗೆ ಮಾಡಿದಲ್ಲಿ ರಾಸುಗಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡುತ್ತದೆ.

### ಬಹು ಕಟಾವು ಮೇವಿನ ಜೋಳದ ವಿಶೇಷ ಗುಣಗಳು

- ಅಧಿಕ ಕವಲೊಡೆಯುವ ಸಾಮರ್ಥ್ಯ ಹೊಂದಿದೆ (19–20 ಕವಲುಗಳು)
- ಅಧಿಕ ಎಲೆ ಮತ್ತು ಕಾಂಡದ ಅನುಪಾತ (0.85) ಹಾಗು ತೆಳುವಾದ ಕಡ್ಡಿ ಹಾಗೂ ಎಲೆಗಳನ್ನು ಹೊಂದಿರುತ್ತದೆ.
- ಶೀಘ್ರ ಕೂಳೆ ಬೆಳವಣಿಗೆ (40–45 ದಿನಗಳು) ಹಾಗಾಗಿ 6–7 ಕೂಳೆಬೆಳೆಯನ್ನು ತೆಗೆಯಬಹುದು.
- ಮೃದುವಾದ, ತೆಳುವಾದ ಹಾಗೂ ರುಚಿಕರ ಕಾಂಡ ಹಾಗು ಹಾಲು ಉತ್ತೇಜಿಸುವ ಅಂಶ ಹೊಂದಿದೆ.
- ಹಸಿರು ಮೇವು / ರಸಮೇವು / ಒಣ ಮೇವಾಗಿ ಬಳಸಬಹುದು.
- ಬೀಜ ಮತ್ತು ಬೇರುಬಿಟ್ಟ ಬೇರಿನ ತುಂಡುಗಳಿಂದ ವೃದ್ಧಿಗೊಳಿಸಬಹುದು.
- ಉತ್ತಮ ಬೇಸಾಯ ಪದ್ಧತಿಯಲ್ಲಿ 4–5 ವರ್ಷದವರೆಗೂ ನಿರಂತರವಾಗಿ ಬೆಳೆ ಕಟಾವು ಮಾಡಬಹುದು.
- ವಿವಿಧ ಹವಾಗುಣ ಹಾಗೂ ಪ್ರತಿಕೂಲ ಪರಿಸ್ಥಿತಿಗಳಿಗೆ ಹೊಂದಿಕೊಂಡು ಬೆಳೆಯುವ ಲಕ್ಷಣವನ್ನು ಹೊಂದಿದೆ.
- ಕಡಿಮೆ ಫಲವತ್ತತೆಯ ಭೂಮಿಯಲ್ಲಿಯೂ ಬೆಳೆಯಬಹುದು ಹಾಗೂ ಈ ಬೆಳೆಗೆ ರೋಗ ಮತ್ತು ಕೀಟಗಳ ಹಾವಳಿ ಕಡಿಮೆ.

### ಬಹುಕಟಾವು ಮೇವಿನ ಜೋಳದ ಮೇವಿನ ಪೌಷ್ಟಿಕತೆ

| ಕ್ರ.ಸಂ. | ಪೌಷ್ಟಿಕಾಂಶ | ಹೊಂದಿರುವ ಅಂಶ (ಶೇ.) |
|---|---|---|
| 1. | ಕಚ್ಚಾ ಸಸಾರಜನಕ | 9–10 |
| 2. | ಕಚ್ಚಾ ನಾರಿನ ಅಂಶ | 34 |
| 3. | ಲವಣಾಂಶ | 9.5 |
| 4. | ಒಟ್ಟು ಬೂದಿ | 44.4 |
| 5. | ಸಕ್ಕರೆ ಅಂಶ | 7.5–8.0 |


ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ
ಕೃಷಿ ವಿಜ್ಞಾನ ಕೇಂದ್ರ,
ಚಂದೂರಾಯನಹಳ್ಳಿ, ಕಲ್ಯಾ ಪೋಸ್ಟ್
ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ – 562 120
ದೂ.: 080 – 29899388 / 9886181307
ಇ-ಮೇಲ್ : kvkramanagara@gmail.com



Designed by
ANJAN VENKATADRI G N

Printed by
AVA 9901556099


# ಉತ್ಕೃಷ್ಟ ಮೇವಿನ ಬೆಳೆ– ಬಹು ಕಟಾವು ಮೇವಿನ ಜೋಳ

## (ಸಿ.ಓ.ಎಫ್.ಎಸ್.–29 ಮತ್ತು 31)


ದಿನೇಶ್, ಎಂ.ಎಸ್.
ಸವಿತಾ, ಎಸ್.ಎಂ.
ಪ್ರೀತು, ಡಿ.ಸಿ.
ಲತಾ ಆರ್ ಕುಲಕರ್ಣಿ
ರಾಜೇಂದ್ರ ಪ್ರಸಾದ್, ಬಿ. ಎಸ್.

भाकृअनुप
ICAR

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ
ರಾಮನಗರ



2018




## ಉತ್ಕೃಷ್ಟ ಮೇವಿನ ಬೆಳೆ-ಬಹು ಕಟಾವು ಮೇವಿನ ಜೋಳ (ಸಿ.ಓ.ಎಫ್.ಎಸ್.-29 ಮತ್ತು 31)

ಕೃಷಿ ಆಧಾರಿತ ಗ್ರಾಮೀಣ ಭಾರತದಲ್ಲಿ ಹೈನುಗಾರಿಕೆಯು ಪ್ರಮುಖ ಆರ್ಥಿಕ ಕಸುಬಾಗಿದ್ದು, ಕೃಷಿ ಕುಟುಂಬದ ದೈನಂದಿನ ಆಯವ್ಯಯದಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಹಾಲಿನ ಉತ್ಪಾದನೆಯಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದ್ದರೂ, ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದರೆ ಪ್ರತಿ ಹೈನು ರಾಸುವಿನ ಹಾಲಿನ ಉತ್ಪಾದನೆ ಬಹಳ ಕಡಿಮೆಯಿದೆ. ಜಾನುವಾರುಗಳ ಹಾಲಿನ ಉತ್ಪಾದನೆಯು ಅವುಗಳಿಗೆ ನೀಡುವ ಗುಣಮಟ್ಟದ ಹಸಿರು ಮೇವು, ಒಣಮೇವು ಪೂರೈಕೆ ಮತ್ತು ಪಶು ಆಹಾರದ ಮೇಲೆ ಅವಲಂಬಿತವಾಗಿರುತ್ತದೆ. ರೈತರು ಹಾಲಿನಿಂದ ಬರುವ ಆದಾಯದಲ್ಲಿ ಶೇಕಡಾ 60 ರಷ್ಟು ಪಶು ಆಹಾರಕ್ಕಾಗಿಯೇ ಖರ್ಚು ಮಾಡುತ್ತಿರುವುದು ಕಂಡು ಬಂದಿದೆ. ನಮ್ಮ ರಾಜ್ಯದಲ್ಲಿ ಶೇಕಡಾ 50 ರಷ್ಟು ಹಸಿರುಮೇವು ಹಾಗೂ ಶೇಕಡಾ 35 ರಷ್ಟು ಒಣ ಮೇವಿನ ಕೊರತೆಯಿದೆ. ಇದಲ್ಲದೆ ಇತ್ತೀಚಿನ ದಿನಗಳಲ್ಲಿ ಪ್ರತಿ ಲೀಟರ್ ಹಾಲಿನ ಉತ್ಪಾದನೆಗೆ ರೈತರು ವ್ಯಯ ಮಾಡುತ್ತಿರುವ ಖರ್ಚು ಅಧಿಕವಾಗುತ್ತಿದ್ದು ಆದಾಯ ಕಡಿಮೆಯಾಗುತ್ತಿದೆ.

ಈ ಸಮಸ್ಯೆಗೆ ಹಲವಾರು ಕಾರಣಗಳಿದ್ದರೂ ಸಹ, ಹೈನು ರಾಸುವಿಗೆ ಪೂರೈಸುತ್ತಿರುವ ಅಸಮತೋಲಿತ ಮೇವು ಮತ್ತು ಅಸಮರ್ಪಕ ಆಹಾರ ಪ್ರಮುಖವಾಗಿವೆ. ಅಸಮತೋಲಿತ ಮೇವು ಪೂರೈಕೆಗೆ ಮುಖ್ಯ ಕಾರಣ ಭಾರತದಲ್ಲಿ ಮಳೆ ಆಶ್ರಿತ ಕೃಷಿಯನ್ನು ಹೆಚ್ಚು ಅವಲಂಬಿಸಿರುವುದು ಮತ್ತು ಸಾಕಷ್ಟು ಪ್ರಮಾಣದಲ್ಲಿ ಗುಣಮಟ್ಟದ ಹಸಿರು ಮೇವು ಉತ್ಪಾದನೆ ಆಗದೇ ಇರುವುದು. ಈ ಕಾರಣದಿಂದಾಗಿ ಹಸಿರು ಮೇವಿನ ಉತ್ಪಾದನೆ ಮತ್ತು ಹೈನುಗಾರಿಕೆಗೆ ಅವಶ್ಯಕತೆಯ ಅಂತರ ತುಂಬಾ ಹೆಚ್ಚಾಗಿದೆ.

ಈ ಅಂತರವನ್ನು ಸರಿದೂಗಿಸಲು ಕೃಷಿ ವಿಜ್ಞಾನಿಗಳು ಸಂಶೋಧನೆಗಳ ಮೂಲಕ ಹಲವಾರು ಉತ್ಕೃಷ್ಟ ಮೇವಿನ ಬೆಳೆಗಳು ಮತ್ತು ತಳಿಗಳನ್ನು ಹೈನುಗಾರಿಕೆಗೆ ಕೊಡುಗೆಯಾಗಿ ನೀಡಿದ್ದಾರೆ. ಈ ನಿಟ್ಟಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ತಮಿಳುನಾಡು ಕೃಷಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಬಿಡುಗಡೆ ಮಾಡಿರುವ ಬಹುಕಟಾವು ಬಹುವಾರ್ಷಿಕ ಮೇವಿನ ಜೋಳದ ತಳಿಗಳಾದ ಸಿ.ಓ.ಎಫ್.ಎಸ್.-29 ಮತ್ತು ಸಿ.ಓ.ಎಫ್.ಎಸ್.-31 ಉತ್ತಮ ಗುಣಮಟ್ಟದ ಹಸಿರು ಮೇವನ್ನು ಒದಗಿಸುತ್ತಿದ್ದು, ಹೈನುಗಾರಿಕೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿವೆ.

### ಬಹುಕಟಾವು ಮೇವಿನ ಜೋಳ

ಜೋಳದಲ್ಲಿ ಧಾನ್ಯದ ಬೆಳೆಯನ್ನು ಮೇವಿಗಾಗಿ ಬೆಳೆಯುತ್ತಿರುವುದು ಬಹಳ ಹಿಂದಿನಿಂದಲೂ ನಮ್ಮಲ್ಲಿ ರೂಢಿಯಲ್ಲಿರುವ ಪದ್ಧತಿ. ಒಣಹವೆ ಇರುವ ಪ್ರದೇಶಗಳಿಗೆ ಇದು ಸೂಕ್ತವಾದ ಮೇವಿನ ಬೆಳೆಯೆನಿಸಿದೆ ಮತ್ತು ಇದರಲ್ಲಿ ಅಭಿವೃದ್ಧಿ ಪಡಿಸಿರುವ ಸುಧಾರಿತ ತಳಿಗಳಿಂದಾಗಿ ಹೆಚ್ಚು ಮತ್ತು ಉತ್ಕೃಷ್ಟ ಮೇವಿನ ಇಳುವರಿ ಪಡೆಯಲು ಸಾಧ್ಯವಾಗಿದೆ.

### ಸುಧಾರಿತ ಬೇಸಾಯ ಕ್ರಮಗಳು :

### ಭೂಮಿ ಸಿದ್ಧತೆ

ಬಹುಕಟಾವು ಮೇವಿನ ಜೋಳದ ಬಿತ್ತನೆ ಬೀಜಗಳ ಗಾತ್ರ ಚಿಕ್ಕದಿರುವುದರಿಂದ ಉತ್ತಮವಾಗಿ ಮೊಳಕೆ ಬರಲು ಹೆಚ್ಚು ಹೆಂಟೆಗಳಿಲ್ಲದ ಹದವಾದ ಮಣ್ಣಿನ ಅವಶ್ಯಕತೆಯಿದೆ. ಭೂಮಿಯನ್ನು ಎರಡು ಬಾರಿ ಚೆನ್ನಾಗಿ ಉಳುಮೆ ಮಾಡಿ ನಂತರ ಹಲುಬೆ ಹಾಯಿಸಿ ಸಮತಟ್ಟಾಗುವಂತೆ ಸಿದ್ಧಮಾಡಿಕೊಂಡು. ಬಿತ್ತನೆಗೆ 3 ವಾರಗಳ ಮುಂಚೆ ಎಕರೆಗೆ 2 ಟನ್ (ಖುಷ್ಕಿ ಯಲ್ಲಿ), 4 ಟನ್ (ನೀರಾವರಿಯಲ್ಲಿ) ಚೆನ್ನಾಗಿ ಕೊಳೆತು ಹದವಾದ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿನಲ್ಲಿ ಸೇರಿಸುವುದು.

### ಬೇಸಾಯಕ್ಕೆ ಬೇಕಾಗುವ ಸಾಮಗ್ರಿಗಳು ಮತ್ತು ಇಳುವರಿ ಪ್ರಮಾಣ:

| ತಳಿಗಳು | ಬಿತ್ತನೆ ಬೀಜ (ಕಿ.ಗ್ರಾಂ./ಎಕರೆ) | ಅಂತರ (ಅಡಿ) | ಸಾವಯವ ಗೊಬ್ಬರ (ಟನ್/ಎ.) | |
|---|---|---|---|---|
| ಸಿ.ಓ.ಎಫ್.ಎಸ್.-29 | 4–5 | 1.5x0.5 | ನೀರಾವರಿ | 4 |
| ಸಿ.ಓ.ಎಫ್.ಎಸ್.-31 | | | ಖುಷ್ಕಿ | 2 |

| ರಾಸಾಯನಿಕ ಗೊಬ್ಬರಗಳು (ಕಿ.ಗ್ರಾಂ/ಎಕರೆಗೆ) | | | ಒಟ್ಟು ಕೊಯ್ಲು (ವರ್ಷಕ್ಕೆ) | ಇಳುವರಿ (ಕ್ವಿಂ./ಎ) |
|---|---|---|---|---|
| ಸಾರಜನಕ | ರಂಜಕ | ಪೊಟ್ಯಾಷ್ | | |
| 36 | 20 | 16 | 5–6 | 60–70 |
| 20 | 10 | 10 | 3–4 | 30–40 |

### ಪೋಷಕಾಂಶಗಳ ನಿರ್ವಹಣೆ

ನೀರಾವರಿ ಬೆಳೆಯಲ್ಲಿ ಪ್ರತಿ ಎಕರೆಗೆ 36:20:16 ಕಿ.ಗ್ರಾಂ. (80 ಕಿ.ಗ್ರಾಂ. ಯೂರಿಯಾ, 125 ಕಿ.ಗ್ರಾಂ. ಸಿಂಗಲ್ ಸೂಪರ್ ಫಾಸ್ಫೇಟ್ ಮತ್ತು 27 ಕಿ.ಗ್ರಾಂ. ಪೊಟ್ಯಾಷ್ ಕ್ರಮವಾಗಿ) ಹಾಗು ಖುಷ್ಕಿ ಬೆಳೆಯಲ್ಲಿ 20:10:10 ಕಿ.ಗ್ರಾಂ. ಸಾರಜನಕ, ರಂಜಕ ಮತ್ತು ಪೊಟ್ಯಾಷ್ (44 ಕಿ.ಗ್ರಾಂ. ಯೂರಿಯಾ, 63 ಕಿ.ಗ್ರಾಂ. ಸಿಂಗಲ್ ಸೂಪರ್ ಫಾಸ್ಫೇಟ್ ಮತ್ತು 17 ಕಿ.ಗ್ರಾಂ. ಪೊಟ್ಯಾಷ್ ಕ್ರಮವಾಗಿ) ಬಳಸುವುದು.

ಬಿತ್ತನೆ ಸಮಯದಲ್ಲಿ ಶೇಕಡ 50 ಸಾರಜನಕ (40 ಕಿ.ಗ್ರಾಂ. ಯೂರಿಯಾ), ಪೂರ್ತಿ ರಂಜಕ ಮತ್ತು ಪೊಟ್ಯಾಷ್ ಒದಗಿಸುವ ರಸಗೊಬ್ಬರಗಳನ್ನು ಮೂಲ ಗೊಬ್ಬರವಾಗಿ ಮಣ್ಣಿನಲ್ಲಿ ಸೇರಿಸುವುದು. ಉಳಿದ 18 ಕಿ.ಗ್ರಾಂ. ಸಾರಜನಕ (40 ಕಿ.ಗ್ರಾಂ. ಯೂರಿಯಾ) ನೀರಾವರಿ ಬೆಳೆಯಲ್ಲಿ ಹಾಗೂ 10 ಕಿ.ಗ್ರಾಂ. ಸಾರಜನಕ (22 ಕಿ.ಗ್ರಾಂ. ಯೂರಿಯಾ) ಖುಷ್ಕಿ ಬೆಳೆಯಲ್ಲಿ ಬಿತ್ತಿದ 35–45 ದಿವಸಗಳ ನಂತರ ಮೇಲುಗೊಬ್ಬರವಾಗಿ ಬಳಸಿ ಮಣ್ಣು ಒತ್ತರಿಸುವುದು. ಪ್ರತಿ ಕಟಾವಿನ ನಂತರ ಎಕರೆಗೆ 5 ಕಿ.ಗ್ರಾಂ. ಸಾರಜನಕವನ್ನು (11 ಕಿ.ಗ್ರಾಂ. ಯೂರಿಯಾ) ಮೇಲುಗೊಬ್ಬರವಾಗಿ ಬಳಸಬೇಕು. ಬೆಳೆಯು ಒಂದು ವರ್ಷ ಪೂರ್ತಿಯಾದ ನಂತರ ಪುನಃ ಶಿಫಾರಿತ ಪ್ರಮಾಣದ ರಸಗೊಬ್ಬರಗಳನ್ನು ಸಮರ್ಪಕವಾಗಿ ಬಳಸಬೇಕು.

### ನೀರಾವರಿ ಮತ್ತು ಕಳೆ ನಿರ್ವಹಣೆ

ಬೆಳೆಯ ಪ್ರಾರಂಭಿಕ ಹಂತದಲ್ಲಿ ಕಳೆಗಳ ಹಾವಳಿ ಹೆಚ್ಚಾಗಿರುವುದರಿಂದ, ಬಿತ್ತನೆ ಮಾಡಿದ 45 ದಿವಸದೊಳಗೆ 2 ಬಾರಿ ಅಂತರ ಬೇಸಾಯ ಮಾಡಿ ಕಳೆ ನಿರ್ವಹಣೆ ಮಾಡಬೇಕು. ಬಹು ಕಟಾವು ಮೇವಿನ ಜೋಳ ನೀರಾವರಿಗೆ ಉತ್ತಮ ಸ್ಪಂದನೆ ಹೊಂದಿದ್ದು ನೀರಾವರಿ ಸೌಲಭ್ಯವಿದ್ದಲ್ಲಿ ಮಣ್ಣು ಮತ್ತು ಹವಾಗುಣಕ್ಕನುಗುಣವಾಗಿ ಹದವರಿತು ನೀರು ಹಾಯಿಸುವುದರಿಂದ ಉತ್ತಮ ಇಳುವರಿ ಪಡೆಯಬಹುದು.

### ಕೊಯ್ಲು ಮತ್ತು ಸಂಸ್ಕರಣೆ

ಉತ್ತಮ ಗುಣಮಟ್ಟದ ಮೇವನ್ನು ಪಡೆಯಲು ಬೆಳೆಯು ಪೂರ್ಣ ಪ್ರಮಾಣದಲ್ಲಿ ಹೂಬಿಟ್ಟ ನಂತರ, ಕಾಳುಗಳಲ್ಲಿ ಹಾಲು ತುಂಬುವ ಸಮಯ ಕಟಾವಿಗೆ ಉತ್ತಮ ಸಮಯ. ಸಾಮಾನ್ಯವಾಗಿ ಮೊದಲನೆಯ ಕಟಾವನ್ನು ಬಿತ್ತನೆ ಮಾಡಿದ 60–70 ದಿವಸಗಳ ನಂತರ ಮಾಡಬೇಕು. ನಂತರ ಪ್ರತಿ ಕಟಾವನ್ನು 40–45 ದಿವಸಗಳಿಗೊಮ್ಮೆ ಮಾಡಬಹುದು.